

# ಮಳೆಬರುವ ಕಾಲಕ್ಕ

**ಮಳೆ ಬರುವ ಕಾಲಕ್ಕೆ ಹೊರಗೆ ಬರಲು ಭಯವೆ? ಅಳುಕೆ? ಹಾಗಿದ್ದರೆ, ಈ ಮಳೆಕಥನ ಓದಿಬಿಡಿ: ಮಳೆ ಎದೆದುಂಬುತ್ತದೆ; ನೆನಪುಗಳು ಭೋರ್ಗರೆಯುತ್ತವೆ.**

■ ರಹಮತ್ ತರೀಕೆರೆ

'ಮಳೆ ಬರುವ ಕಾಲಕ್ಕ ಒಳಗ್ಯಾಕ ಕುಂತೆವ್ರು, ಮಳೆಯೊಳಗೆ ಜಳಕವಾಡೋಣ, ನಾವ್ರೂನೂ ಮೋಡಗಳ ಆಟ ನೋಡೋಣ' ಎಂಬ ಕವಿಸಂದೇಶ ನನಗೆ ಬಹಳ ಪ್ರಿಯವಾದುದು. ಕಾರಣ, ಇದನ್ನು ಬಾಳಿನುದ್ದಕ್ಕೂ ಸಾಧ್ಯವಾದಷ್ಟೂ ಪಾಲಿಸಿಕೊಂಡು ಬಂದಿರುವೆ. ಸಪ್ತಸಾಗರದಾಚೆ ಉಪ್ಪುನೀರು ಆವಿಯಾಗಿ ಮೋಡಗಟ್ಟಿ, ಗಾಳಿಯಲ್ಲಿ ಪಯಣಿಸುತ್ತ ಬಂದು ಮನೆಯಂಗಳದಲ್ಲಿ ಸುರಿದುಹೋಗುವುದು ನನಗೆ ಪವಾಡದಂತೆ ತೋರುತ್ತದೆ. ಪರ್ವತಗಳಲ್ಲಿ ಹುಟ್ಟಿದ ಹೊಳೆ ಊರಿಗೆ ಬಂದಂತೆ, ಎಲ್ಲೊ ಹುಟ್ಟಿದ ಗಂಡುಹೆಣ್ಣು ಸಂಗಾತಿಗಳಾದಂತೆ ಆಪ್ತವೆನಿಸುತ್ತದೆ. ಎಳವೆಯಲ್ಲಿ ನಾವು ಮೊದಲ ಮಳೆಗೆ ಅಂಗಳಕ್ಕಿಳಿದು ತಕತಕಿಸುತ್ತಿದ್ದೆವು; ಸೂರನೀರಿಗೆ ಕೈಯೊಡ್ಡಿ ಜಗುಲಿಯಲ್ಲಿ ನಿಲ್ಲುತ್ತಿದ್ದೆವು. ಅಮ್ಮ ಒಳಗಿಂದ 'ರೇ' ಎಂದು ಆವಾಜ್ ಹಾಕುತ್ತಿದ್ದಳು. ಸಿಡಿಲು ಬಡಿಯಬಾರದೆಂದು ಕುಡುಗೋಲನ್ನು ಅಂಗಳಕ್ಕೆಸೆದು, ನಮ್ಮನ್ನು ಒಳಗೆಳೆದುಕೊಂಡು ಬಾಗಿಲು ಮುಚ್ಚುತ್ತಿದ್ದಳು. ಅಮ್ಮನ ಛಾರ್ಜನ್ನು ಈಗ ಬಾನು ವಹಿಸಿಕೊಂಡಿದ್ದಾಳೆ. ಇವಳಿಗೆ ಗಂಡನಿಗಿಂತ ಮನೆ ಮುಖ್ಯ. ಬಾಂದಳದಲ್ಲಿ ಮೋಡಕವಿದು ನೋಟಿಸು ಬರುತ್ತಿದ್ದಂತೆ, ಅವಳ ಗುಡುಗು ಸಿಡಿಲು ಶುರುವಾಗುತ್ತವೆ. ದಂಡು ಬಂದಾಗ ಊರು ತಲ್ಲಣಿಸುವಂತೆ ಗಾಬರಿಯಿಂದ ಓಡಾಡುತ್ತ ಕಿಟಕಿ ಮುಚ್ಚುವ, ಟೀವಿ ಫ್ರಿಜ್ಜುಗಳ ವಿದ್ಯುತ್ ಸಂಪರ್ಕ ಕಳೆವ, ಒಣಹಾಕಿದ ಬಟ್ಟೆ ಒಳತರುವ ಗಡಿಬಿಡಿಯಲ್ಲಿ ತೊಡಗುತ್ತಾಳೆ. ನಾನು ಬೇಕಾಬಿಟ್ಟಿ ಕಿಟಕಿಗಳನ್ನು ತೆರೆದಿಡುವೆನಂತೆ. ಗಾಳಿಬೆಳಕು ಒಳಬರಲೆಂದೇ ಅವನ್ನು ಇಡಿಸಿರುವಾಗ ಸದಾ ಮುಚ್ಚಿಡುವುದೇಕೆ ಎಂದು ನನ್ನ ಪ್ರಶ್ನೆ. 'ಧೂಳು ಗುಡಿಸು ಗೊತ್ತಾಗುತ್ತೆ' ಎಂದು ಬಾಯ್ಮುಚ್ಚಿಸುತ್ತಾಳೆ.

ತುಸುಹೊತ್ತು ಬಡಬಡಿಸುವ ಕದಕಿಟಕಿ ಮುಚ್ಚುತ್ತ ಸಭ್ಯ ಗೃಹಸ್ಥನ ನಟನೆ ಮಾಡುತ್ತೇನೆ. ಬಳಿಕ ಉಪ್ಪರಿಗೆಯ ಕಿಟಕಿಗಳನ್ನು ಹಾಕುವ ನೆಪದಲ್ಲಿ ನುಸುಳಿ ಮೇಲೇರುತ್ತೇನೆ. ಟೆರೇಸಿನಿಂದ ಆಗಸದ ಹಲಗೆಯ ಮೇಲೆ ಬೆಳಕಿನ ಬಳಪದಲ್ಲಿ ಸಿಡಿಲುಗಳ ಗೀಚಾಟ, ಮೋಡಗಳ ತೆರೆಯೊಳಗಿಂದ ಕಣ್ಣುಮಿಟುಕಿಸುವ ಮಿಂಚಾಟ, ಗುಡುಗಿನ ನಗಾರಿಯ ಬಡಿತ ಚೆನ್ನಾಗಿ ಗಮನಿಸಬಹುದು. ಮನೆಯೆದುರಿನ ಅಶೋಕವೃಕ್ಷ ಸುಂಯ್ಯೋ ಗಾಳಿಗೆ ನಮಾಜು ಮಾಡುತ್ತಿದೆ; ಗಾಳಿ ಗೆಲ್ಲುಗಳನ್ನು ಮುರಿದೊಗೆಯುತ್ತ ಕಥಕ್ಕಳಿಯಾಡುತ್ತಿದೆ; ಸರಿಯದಿದ್ದರೆ ಬಡಿದೇನು ಎಂಬಂತೆ ಇರಿಸಲು ಬಾರಿಸುತ್ತಿದೆ. ಜನಪದರ ಪ್ರಕಾರ, ದೇವತೆಗಳ ಜಳಕವೇ ಮಳೆಯಂತೆ. ಪಾತ್ರೆ ಬೆಳಗಾಟವೇ ಮಿಂಚಂತೆ, ಕೈತಪ್ಪಿಬಿದ್ದ ಗಂಗಾಳವೇ ಗುಡುಗಂತೆ. ಪುರಾಣದ ಇಂದ್ರ ವರುಣರಿಗೆ ಹೋಲಿಸಿದರೆ, ಸುರಲೋಕದಲ್ಲೂ ತಮ್ಮ ಪಡಿಪಾಟಲನ್ನೇ ಕಾಣುವ ಜನರ ಈ ಕಲ್ಪನೆ ವಿಶಿಷ್ಟವಾಗಿದೆ.

ತುಸು ಹೊತ್ತಲ್ಲಿ ಗುಡುಗು ಸಿಡಿಲು ಗಾಳಿಗಳ ರುದ್ರನಾಟಕದ ಪ್ರಥಮ ಅಂಕ ಮುಗಿಯುತ್ತದೆ. ನೆತ್ತಿಯ ಮೇಲೆ ಕೆರೆಯಂಥ ಕಾರ್ಮೋಡ ರಂಗಪ್ರವೇಶಿಸಿ, ಶ್ರುತಿ ಹಿಡಿದಂತೆ ಒಂದೇ ಸವನೆ ಸುರಿಯಲು ಆರಂಭಿಸುತ್ತದೆ. ಸುತ್ತ ಮರಗಳು ಬೆಳೆದು ನನ್ನ ಜಲಕೇಳಿಗೆ ತಕ್ಕ ಏಕಾಂತ ಒದಗಿಸಿರುವ ಟೆರೇಸಿನ ಚಿರಾಪುಂಜಿಗೆ ಅಳುಕುತ್ತ ಇಳಿಯುತ್ತೇನೆ. ಮೊದಲ ತುಂತುರಿಗೆ ತನು ಕಂಪಿಸುತ್ತದೆ. ಸೂಜಿಹನಿಗಳು ಚುಚ್ಚುತ್ತ ನವಿರೆಬ್ಬಿಸುತ್ತವೆ. 'ನೀರೊಳಗಿರ್ದುಂ ಬೆಮರ್ತನ್' ಸುಯೋಧನನಂತೆ ನನ್ನ ಮೈಗಾವೇರುತ್ತದೆ. ಆದರೆ ಕ್ರಮೇಣ ತಂಪಿಗೊಡ್ಡಿಕೊಂಡು ಜಲದ ಹಿತಾಲಿಂಗನಕ್ಕೆ ತಯಾರಾಗುತ್ತದೆ. ಗೊಮ್ಮಟನೊಲು ನಿಲ್ಲುತ್ತೇನೆ. ತಲೆಗೂದಲಿಂದ ತೊಟ್ಟಿಕ್ಕಿದ ನೀರು, ಎದೆಯ ಮೇಲೆ ಬಿದ್ದು ನಾಭಿ ಮೂಲಕ ಮೊಣಕಾಲುಗಳಿಗೆ ಹರಿದು ಪಾದಕ್ಕಿಳಿಯುತ್ತದೆ. ಶರವರ್ಷಕ್ಕೆ ಮೈಯೊಡ್ಡಿ ಭೀಷ್ಮರಂತೆ ಅಂಗಾತ ಮಲಗುತ್ತೇನೆ.